KARNATAKA LEGISLATIVE ASSEMBLY, RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER:
DATE:

ಸಣ್ಣ ವ್ಯಾಪಾರಿಗಳ ಜತೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರಧಾನಿ ಹೇಳಿಕೆ

# ಬೀದಿಬದಿ ವರ್ತಕರಿಗೂ ಆನ್‌ಲೈನ್ ಡೆಲಿವರಿ

**ಭೋಪಾಲ್/ನವದೆಹಲಿ:** ರೆಸ್ಟೋರಂಟ್‌ಗಳ ರೀತಿಯಲ್ಲೇ ಬೀದಿಬದಿ ತಿಂಡಿ-ತಿನಿಸು ವ್ಯಾಪಾರಸ್ಥರಿಗೂ ಆನ್‌ಲೈನ್ ಡೆಲಿವರಿ ವೇದಿಕೆ ಕಲ್ಪಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಪ್ರಧಾನ ಮಂತ್ರಿಯವರ ಬೀದಿಬದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ (ಪಿಎಂ ಸ್ವನಿಧಿ) ಯೋಜನೆಯ ಕೆಲವು ಫಲಾನುಭವಿಗಳೊಂದಿಗೆ ವರ್ಚುವಲ್ ಸಂವಾದ ನಡೆಸಿದ ಮೋದಿ, ಈ ಯೋಜನೆಯನ್ನು ತುಂಬಾ ಪರಿಣಾಮಕಾರಿಯಾಗಿ ಜಾರಿ ಮಾಡಿರುವ ಮಧ್ಯಪ್ರದೇಶ ಸರ್ಕಾರವನ್ನು ಅಭಿನಂದಿಸಿದರು. ರಾಜ್ಯದಲ್ಲಿ ಯೋಜನೆ ಆರಂಭವಾದ ಕೇವಲ ಎರಡು ತಿಂಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಸೌಲಭ್ಯ ಕಲ್ಪಿಸಲಾಗಿದೆ. 4.5 ಲಕ್ಷ ಫಲಾನುಭವಿಗಳಿಗೆ ಗುರುತಿನ ಚೀಟಿ ವಿತರಿಸಲಾಗಿದೆ ಎಂದರು.

ಇತರ ರಾಜ್ಯಗಳೂ ಮಧ್ಯಪ್ರದೇಶದಿಂದ ಸ್ಫೂರ್ತಿ ಪಡೆದು ಕಾರ್ಯಪ್ರವೃತ್ತವಾಗಬೇಕೆಂದು ಪ್ರಧಾನಿ ಕರೆ ನೀಡಿದರು. ಕೋವಿಡ್-19 ಮಹಾಮಾರಿಯಿಂದ ಬಾಧಿತರಾದ ಬೀದಿಬದಿ ವ್ಯಾಪಾರಸ್ಥರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ ಈ ಯೋಜನೆ ರೂಪಿಸಿದೆ. ರೆಸ್ಟೋರೆಂಟ್‌ಗಳಂತೆ ಬೀದಿಬದಿ ಆಹಾರ ವ್ಯಾಪಾರಸ್ಥರು ಕೂಡ ಮನೆಮನೆಗೆ ಆಹಾರ ಡೆಲಿವರಿ ಮಾಡುವ ವೇದಿಕೆಯೊಂದನ್ನು ರೂಪಿಸಲು ಯೋಜನೆ ಸಿದ್ಧವಾಗಿದೆ ಎಂದು ವಿವರಿಸಿದರು. ಬೀದಿಬದಿ ವರ್ತಕರು ಮುಂದೆ ಬಂದರೆ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದರು. ಬೀದಿ ವ್ಯಾಪಾರಸ್ಥರು ದೊಡ್ಡ ಪ್ರಮಾಣದಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಅಳವಡಿಸಿಕೊಳ್ಳುವಂತೆಯೂ ಸಲಹೆ ಮಾಡಿದರು.



## ಮೀನುಗಾರರಿಗೆ ಯೋಜನೆ

ಮೀನುಗಾರರ ಅನುಕೂಲಕ್ಕಾಗಿ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯನ್ನು ಪ್ರಧಾನಿ ಮೋದಿ ಗುರುವಾರ ಆನ್‌ಲೈನ್ ಮೂಲಕ ಉದ್ಘಾಟಿಸಲಿದ್ದಾರೆ. ರೈತರಿಗೆ ಸಹಾಯಕಾರಿಯಾದ ಇ-ಗೋಪಾಲ ಆ್ಯಪ್‌ಗೂ ಚಾಲನೆ ನೀಡಲಿದ್ದಾರೆ.

## ಪ್ಲಾಸ್ಟಿಕ್ ಬಾಟಲಿ ಕೈಬಿಡಿ

ಕುಡಿಯುವ ನೀರಿಗಾಗಿ ಏಕ-ಬಳಕೆಯ ಪ್ಲಾಸ್ಟಿಕ್ ಬಾಟಲಿಗಳನ್ನು ಬಿಟ್ಟು ಮಣ್ಣಿನ ಮಡಕೆಗಳನ್ನು ಬಳಸುವಂತೆ ಪ್ರಧಾನಿ ಈ ಸಂದರ್ಭ ಮನವಿ ಮಾಡಿದರು. ಪರಿಸರ ರಕ್ಷಣೆಗೆ ಇದು ಅಗತ್ಯ ಎಂದರು. ಪೊರಕೆಗಳನ್ನು ತಯಾರಿಸಲು ಬಳಸುವ ಪೈಪ್‌ಗಳನ್ನು ಮರಳಿಸುವಂತೆ ಗ್ರಾಹಕರಿಗೆ ಮನವಿ ಮಾಡುವ ಮೂಲಕ ವ್ಯಾಪಾರ ಹೆಚ್ಚಿಸಿಕೊಳ್ಳಬಹುದೆಂದು ಮೋದಿ ಸಲಹೆ ಮಾಡಿದರು. ಆಯುಷ್ಮಾನ್ ಭಾರತ್ ಯೋಜನೆ ಕುರಿತೂ ಅವರು ಮಾತುಕತೆ ನಡೆಸಿದರು.

## ಮೂರು ಮಂತ್ರ ಪಾಲಿಸಿ

ಕರೊನಾ ಮಹಾಮಾರಿ ಹರಡುವುದನ್ನು ತಡೆಯಲು ಹೇರಿದ್ದ ಲಾಕ್‌ಡೌನ್ ನಂತರ ಹೊಸದಾಗಿ ವ್ಯಾಪಾರ ವಹಿವಾಟು ಆರಂಭಿಸಲು ಮುಂದಾಗಿರುವ ಮಧ್ಯ ಪ್ರದೇಶದ ಬೀದಿಬದಿ ವ್ಯಾಪಾರಿಗಳಿಗೆ ಮೋದಿ ಕೆಲವು ಕಿವಿಮಾತು ಹೇಳಿದರು. ಮಾಸ್ಕ್ ಧರಿಸುವುದು, ಸ್ವಚ್ಛತೆ, ಆರಡಿ ಅಂತರ ಕಾಯ್ದುಕೊಳ್ಳುವಿಕೆ- ಈ ಮೂರು ಮಂತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕರೆ ನೀಡಿದರು. 'ಕರೊನಾ ಲಸಿಕೆ ಬರುವವರೆಗೂ ನಿಮ್ಮ ಕುರಿತು ನೀವೇ ಗರಿಷ್ಠ ಎಚ್ಚರಿಕೆ ವಹಿಸಬೇಕು. ಗ್ರಾಹಕರ ಬಗ್ಗೆಯೂ ಎಚ್ಚರವಹಿಸಿ' ಎಂದು ಹೇಳಿದರು.

ಸಲಿಸಲಾಗಿರುವ ಅರ್ಜಿಗಳ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಬುದವಾರ ನಿರಾಕರಿಸಿದೆ. ಪರಿ